

# ಉಡುಗೆ ತುಂಬ ಪ್ರಾಣಿ ಬಿಂಬ!

**ಉಡುಗೆಯಲ್ಲಿ ಪ್ರಾಣಿ, ಪಕ್ಷಿಗಳ ಚಿತ್ರದ ಪ್ರಿಂಟ್ಸ್ ಮಕ್ಕಳಿಗೆ ಪ್ರಿಯವಾದುದು. ಆದರೆ ಈಗ ಎಲ್ಲ ವಯೋಮಾನದ ಮಹಿಳೆಯರೂ ಎನಿಮಲ್ ಪ್ರಿಂಟ್ಸ್ ಉಡುಪು ಇಷ್ಟಪಡುತ್ತಿದ್ದು, ಫ್ಯಾಷನ್ ಟ್ರೆಂಡ್ ಎನಿಸಿದೆ.**

■ **ಆಶಾ ಎಸ್. ಕುಲಕರ್ಣಿ**

ಭಾರತೀಯ ಫ್ಯಾಷನ್ ಜಗತ್ತಿನಲ್ಲಿ ದಿನಕ್ಕೊಂದು ಟ್ರೆಂಡ್ ಬದಲಾಗುತ್ತಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಬಹು ಬೇಡಿಕೆಯಿರುವ ಎನಿಮಲ್ ಪ್ರಿಂಟ್ ಬಟ್ಟೆಗಳು ಈಗ ಭಾರತದಲ್ಲೂ ಜನಪ್ರಿಯತೆಯ ಹಾದಿ ಹಿಡಿದಿದೆ. ನಾಯಿ, ಬೆಕ್ಕು, ಜಿಂಕೆ, ಚಿರತೆ, ಹುಲಿ, ಜಿರಾಫೆಯ ಪ್ರತಿರೂಪವನ್ನು ಉಡುಗೆಗಳಲ್ಲಿ ಪ್ರಿಂಟ್ ಹಾಕಲಾಗಿದ್ದು, ಮಕ್ಕಳೂ ಸೇರಿದಂತೆ ಎಲ್ಲ ಮಹಿಳೆಯರ ಪ್ರೀತಿಯ ಉಡುಗೆ ಎನಿಸಿಕೊಂಡಿದೆ.

ಪ್ರಾಣಿ, ಪಕ್ಷಿಗಳ ಸಂತತಿ ಕಡಿಮೆಯಾಗುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಇವುಗಳ ಸಂರಕ್ಷಣೆಗೆ ಇರುವ ಸಂಸ್ಥೆಗಳು ಒಂದು ಮಹತ್ವದ ಉದ್ದೇಶದಿಂದ ಬಟ್ಟೆಗಳ ಮೇಲೆ ಪ್ರಾಣಿ, ಪಕ್ಷಿಗಳ ಚಿತ್ರಗಳನ್ನು ವಿನ್ಯಾಸಗೊಳಿಸುತ್ತಿದ್ದಾರೆ. ಇವೆಲ್ಲ ಈಗ ಟ್ರೆಂಡಿಯಾಗಿ ಮನಗೆಲ್ಲುತ್ತಿದೆ. ಯುವಕರಿಗಿಂತ ಯುವತಿಯರಲ್ಲಿಯೇ ಇದು ಹೆಚ್ಚು ಫ್ಯಾಷನ್‌ಗೆ ಕಾರಣವಾಗಿದೆ.

ಎನಿಮಲ್ ಪ್ರಿಂಟ್ ಬಟ್ಟೆಗಳಲ್ಲಿ ಪ್ರಮುಖವಾಗಿ ಚಿರತೆ ಪಟ್ಟೆಯಿರುವ ಬಟ್ಟೆಗಳಿಗೆ ಹಾಗೂ ಹಸುವಿನ ಪ್ರಿಂಟ್ ವಿನ್ಯಾಸವಿರುವ ಬಟ್ಟೆಗಳಿಗೆ ಇದೀಗ ಭಾರೀ ಬೇಡಿಕೆ. ಚಿರತೆ ಪಟ್ಟೆಯಿರುವ ಟಾಪ್, ಲೆಗಿಂಗ್ಸ್ ಜೊತೆಗೆ ಆ್ಯಕ್ಸೆಸರೀಸ್ ಕೂಡ ಪ್ರಾಣಿಗಳ ಪ್ರಿಂಟ್ಸ್‌ನ್ನು ಒಳಗೊಂಡಿದೆ.

ಶೂಸ್‌ಗಳು, ಟೋಪಿ, ಪರ್ಸ್, ಸ್ಕಾರ್ಫ್, ಸ್ಕರ್ಟ್, ಕೋಟು, ಜಾಕೆಟ್ ಅಲ್ಲದೆ ಹೇರ್‌ಬನ್, ಹೇರ್ ಕ್ಲಿಪ್, ಹೇರ್ ಬ್ಯಾಂಡ್‌ಗಳು, ಬೆಲ್ಟ್... ಹೀಗೆ ವಿವಿಧ ರೀತಿಯ ವಸ್ತುಗಳನ್ನು ಈ ವಿನ್ಯಾಸದಲ್ಲಿಯೇ ತಯಾರಿಸಲಾಗುತ್ತಿದೆ. ಇದೀಗ ಈ ಫ್ಯಾಷನ್ ಬರೀ ಬಟ್ಟೆಗೆ ಮಾತ್ರ ಸೀಮಿತವಲ್ಲದೆ ಪ್ಲಾಸ್ಟಿಕ್, ಲೆದರ್ ಮೇಲೆ ಕೂಡ ಇದರ ವಿನ್ಯಾಸವಿದೆ. ಈ ಚಿರತೆ ಪಟ್ಟೆಯ ಟಾಪ್‌ಗೆ ಪ್ಲೇನ್ ಲೆಗಿಂಗ್ಸ್ ಅಥವಾ ಪ್ಯಾಂಟ್ ಸೂಕ್ತವಾಗಿ ಹೊಂದಿಕೊಳ್ಳುತ್ತದೆ. ಇದಕ್ಕೆ ತಕ್ಕಂತೆ ಪರ್ಸ್, ಟೋಪಿ, ಶೂ ಕೂಡ ಹಾಕಿಕೊಳ್ಳಬಹುದು. ಹಾಗೆಯೇ ಚಿರತೆಪಟ್ಟೆ ಪ್ಯಾಂಟ್ ಮೇಲೆ ಪ್ಲೇನ್ ಟಾಪ್‌ಗಳೂ ಚೆನ್ನಾಗಿ ಕಾಣುತ್ತವೆ. ವಿವಿಧ ವರ್ಣಗಳಲ್ಲಿ ಲಭ್ಯವಿರುವ ಈ ಬಟ್ಟೆಗಳು ನೋಡಲು ಬಹಳ ಆಕರ್ಷಕವಾಗಿದ್ದು ಮದುವೆ ಸಮಾರಂಭಗಳನ್ನು ಹೊರತುಪಡಿಸಿ ಮಿಕ್ಕೆಲ್ಲಾ ಸಮಾರಂಭಗಳಲ್ಲಿ ಈ ಬಟ್ಟೆ ಧರಿಸಬಹುದು.

ಹಾಲಿವುಡ್ ಚಿತ್ರ ತಾರೆಯರಿಂದ ಪ್ರಾರಂಭವಾದ ಈ ಫ್ಯಾಷನ್ ಇದೀಗ ಬಾಲಿವುಡ್‌ಗೂ ಹಬ್ಬಿದೆ. ನಟಿಮಣಿಯರು ತಮ್ಮ ದಿನನಿತ್ಯದ ಉಡುಪಿಗೂ ಈ ಬಟ್ಟೆಗಳನ್ನೇ ಬಳಸುತ್ತಿದ್ದಾರೆ. ಹಾಗೆಯೇ ಬರೀ ಡ್ರೆಸ್‌ಗಳಿಗೆ ಮಾತ್ರ ಸೀಮಿತವಾಗಿರದ ಈ ಪ್ರಿಂಟ್ ಇದೀಗ ಸೀರೆಗಳ ಮೇಲೂ ಆಕರ್ಷಕವಾಗಿ ಕಂಗೊಳಿಸುತ್ತಿದೆ. ನೈಟ್ ಪಾರ್ಟಿ, ಗೆಟ್ ಟುಗೆದರ್ ಮುಂತಾದ ಕಡೆಗಳಲ್ಲಿ ಈ